ಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

KARNATAKA STATE AKKAMAHADEVI WOMEN'S UNIVERSITY, VIJAYAPURA

ಸಂಶೋಧನಾ ವಿಷಯ

"ಲಿಂಗತ್ವ ಮತ್ತು ಬುಡಕಟ್ಟು ಸಮುದಾಯ : ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಮಹಿಳೆಯರ ಸಮಗ್ರ ಅಧ್ಯಯನ"

(ಪಿ.ಎಚ್.ಡಿ ಮಹಾಪ್ರಬಂಧಕ್ಕೆ ಸಲ್ಲಿಸುತ್ತಿರುವ ಸಾರಲೇಖ)

ಸಂಶೋಧನಾ ವಿದ್ಯಾರ್ಥಿನಿ

ಮಿನಿಮೋಳ್. ಹೆಚ್

ಮಹಿಳಾ ಅಧ್ಯಯನ ವಿಭಾಗ

ಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ. ಹೊರಾವರಣ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಮಂಡ್ಯ

ಮಾರ್ಗದರ್ಶಕರು

ಡಾ. ಹೇಮಲತಾ ಎಚ್.ಎಂ

ಮಹಿಳಾ ಅಧ್ಯಯನ ವಿಭಾಗ

ಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ. ಹೊರಾವರಣ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಮಂಡ್ಯ

“ಲಿಂಗತ್ವ ಮತ್ತು ಬುಡಕಟ್ಟು ಸಮುದಾಯ:

ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಮಹಿಳೆಯರ ಸಮಗ್ರ ಅಧ್ಯಯನ”

ಪೀಠಿಕೆ:–

ಸಮಾಜವು ಹಲವಾರು ಜಾತಿ–ಧರ್ಮ, ಶ್ರೀಮಂತ–ಬಡವ, ಬುಡಕಟ್ಟು ಸಮುದಾಯ ಹೀಗೆ ಹಲವಾರು ವರ್ಗಗಳನ್ನು ಒಳಗೊಂಡಿದೆ. ಪ್ರಕೃತಿಯಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆ ಇದ್ದರೂ ಸಹ ಸಮಾಜದಲ್ಲಿ ಹಲವಾರು ವ್ಯತ್ಯಾಸಗಳಿವೆ. ಜಗತ್ತಿನಾದ್ಯಂತ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ ಇದರ ಸಂಸ್ಕೃತಿ ಕ್ರಮವಾಗಿ ನಗರ, ಗ್ರಾಮ ಎಂದು ವಿಂಗಡಿಸಲಾಗಿದೆ. ಇದನ್ನು ಹೊರತುಪಡಿಸಿ ಈ ಪ್ರಕೃತಿಯಲ್ಲಿ ವಾಸಿಸುತ್ತಿರುವ ಇನ್ನೊಂದು ಸಮುದಾಯವೆಂದರೆ ಅದು ‘ಬುಡಕಟ್ಟು’ ಸಮುದಾಯವಾಗಿದೆ. ವಿಶಿಷ್ಟ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪರಂಪರೆ ಆಚರಣೆಗಳನ್ನು ಹೊಂದಿದ, ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ, ಭೌಗೋಳಿಕವಾಗಿ ಪ್ರತ್ಯೇಕತೆ ಹೊಂದಿರುವ ಜನಾಂಗೀಯ ಸಮುದಾಯವನ್ನು ‘ಬುಡಕಟ್ಟು’ ಎನ್ನುವರು. ಆಂಗ್ಲಭಾಷೆಯಲ್ಲಿ ಬಳಸುವ ‘ಟ್ರೈಬ್’ ಎನ್ನುವ ಪದ ಗ್ರೀಕ್ ಮೂಲದಿಂದ ಬಂದಿದ್ದು ಇದರ ಪರಿಕಲ್ಪನೆಯ ಸಮಾನಾರ್ಥವಾಗಿ ಕನ್ನಡದಲ್ಲಿ ಬುಡಕಟ್ಟು ಎಂಬ ಪರಿಕಲ್ಪನೆ ಪ್ರಚಲಿತವಾಗಿದೆ.(ಕರ್ನಾಟಕ ಬುಡಕಟ್ಟು ಸಚಿತ್ರಕೋಶ ಪುಟ4).

ಬುಡಕಟ್ಟು ಸಮುದಾಯದ ಲಕ್ಷಣಗಳನ್ನು ನೋಡುವುದಾದರೆ:– ಪ್ರತ್ಯೇಕ ಸಂಸ್ಕೃತಿ, ರಕ್ತಸಂಬಂಧದ ಅತಿಯಾದ ಅವಲಂಬನೆ, ಬೇರೆಯವರನ್ನು ಸಂದೇಹದಿಂದ ನೋಡುವುದು, ದೈವದ ವಿಶಿಷ್ಟ ಕಲ್ಪನೆ ಮತ್ತು ಭಕ್ತಿ, ಅತಿಯಾದ ಪಾವಿತ್ರ್ಯ, ಪ್ರತ್ಯೇಕ ಭಾಷೆ, ಕಾಡಿನಲ್ಲಿ ಬದುಕು, (ಕು. ಮಹಾನಂದಗೊಂದಿ ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟುಗಳು). ಹೀಗೆ ಹಲವಾರು ಲಕ್ಷಣಗಳು ಬುಡಕಟ್ಟುಗಳಲ್ಲಿ ಸಾಮಾನ್ಯವಾಗಿರುತ್ತದೆ. ಈ ಬುಡಕಟ್ಟುಗಳನ್ನು ಆದಿವಾಸಿ, ಅರಣ್ಯವಾಸಿ, ಗಿರಿಜನ, ವನವಾಸಿಗಳು, ಅಲೆಮಾರಿಬುಡಕಟ್ಟು, ಪರಿಶಿಷ್ಟ ಪಂಗಡದವರು ಎಂದು ನಾನಬಗೆಯ ಹೆಸರುಗಳಿಂದ ಕರೆಯುತ್ತಾರೆ.

ಅರ್ಥ ಮತ್ತು ವ್ಯಾಖ್ಯಾನಗಳು:

* **ಗಿಲಿನ್ ಮತ್ತು ಗಿಲಿನ್** ಪ್ರಕಾರ:– “ಒಂದು ಭಾಷೆಯನ್ನು ಮಾತಾನಾಡುವ ಮತ್ತು ಸಾಮಾನ್ಯ ಸಂಸ್ಕೃತಿಯನ್ನು ಹೊಂದಿ, ಒಂದೇ ಪ್ರದೇಶದಲ್ಲಿ ವಾಸಿಸುವ ಸ್ಥಳೀಕ ಸಮುದಾಯವನ್ನು ಬುಡಕಟ್ಟು” ಎಂದಿದ್ದಾರೆ.

* **ಕಿಟ್ಟೆಲ್ಲರ ಅರ್ಥಕೋಶದ ಪ್ರಕಾರ:**–ಬುಡಕಟ್ಟು ಎಂಬ ಶಬ್ಧಕ್ಕೆ ‘ಕುಟುಂಬ’ ಹಾಗೂ ‘ಕುಲ’ ಎಂಬ ಅರ್ಥವನ್ನು ನೀಡಲಾಗಿದೆ.

ಪ್ರಪಂಚದಲ್ಲಿ ಒಟ್ಟು ಬುಡಕಟ್ಟು ಜನಸಂಖ್ಯೆ 370 ಮಿಲಿಯನ್‌ನಷ್ಟಿದೆ. (ILO ವರದಿ ಪ್ರಕಾರ), ಭಾರತದ ಒಟ್ಟು ಬುಡಕಟ್ಟು ಜನಸಂಖ್ಯೆ 10 ಮಿಲಿಯನ್ (2011 ಜನಗಣತಿ ಪ್ರಕಾರ), ಕರ್ನಾಟಕದಲ್ಲಿ ಬುಡಕಟ್ಟು ಜನಸಂಖ್ಯೆ 42,42,000 (2011 ಜನಗಣತಿ ಪ್ರಕಾರ). ಚಿತ್ರದುರ್ಗದಲ್ಲಿ 4,00000 (2011 ಜನಗಣತಿ ವರದಿ ಪ್ರಕಾರ) ಹೀಗೆ ಪ್ರಾಚೀನ ಕಾಲದಿಂದ ಈ ಆಧುನಿಕ ಕಾಲದಲ್ಲಿಯೂ ಪ್ರಪಂಚದಾದ್ಯಂತ ಸಹಸ್ರಾರು ಬುಡಕಟ್ಟು ಸಮುದಾಯಗಳನ್ನು ಕಾಣಬಹುದು. ಉದಾಹರಣೆಗೆ ನೋಡುವುದಾದರೆ : ಸೌತ್‌ಅಮೇರಿಕಾದಲ್ಲಿ ಅಂಟಾ, ಅಕ್ವಾಯಿರ್, ಚಾಚಾಪಾಯಸ್, ಬೋಲವಿಯಾ ಮುಂತಾದವುಗಳು. ಸೌತ್ ಆಫ್ರಿಕಾದಲ್ಲಿ 3000 ರೀತಿಯ ಬುಡಕಟ್ಟುಗಳನ್ನು ಕಾಣಬಹುದು ಉದಾ: ಮಾಸಿ, ಸಾಂಡ್ರೆ, ಹಡ್ಜಾ, ನಾಮಾ ಇತರೆ. ಜಗತ್ತಿನಲ್ಲಿ ಭಾರತವು ಅತೀ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ದೇಶವಾಗಿದೆ. (ILOಪ್ರಕಾರ) ಭಾರತದಲ್ಲಿ ಅರುಣಾಚಲಾ ಪ್ರದೇಶ, ಅಸ್ಸಾಂ, ಮೇಘಲಯಾ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರಾ ಈ ರಾಜ್ಯಗಳಲ್ಲಿ ಹೆಚ್ಚು ಬುಡಕಟ್ಟುಗಳು ನೆಲೆಸಿದ್ದಾರೆ. ಮಧ್ಯಪ್ರದೇಶದಲ್ಲಿ–ಬಗಾ, ಕೊರಕು, ಕೇಲ್ ಇತರೆ. ಒರಿಸ್ಸಾದಲ್ಲಿ–ಬಂಜಾರ, ಒತುಡಿ, ಬುಮಿಯಾ. ಆಂಧ್ರಪ್ರದೇಶದಲ್ಲಿ– ವಡ್ಡಾರ, ಬಿಲ್, ಚೆಂಡು, ಯಾದವ, ಗೊಂಡ ಇತರೆ. ತಮಿಳುನಾಡಿನಲ್ಲಿ– ಇರುಲರ್, ಅನಿಯನ್, ಕದರ್ ಇತರೆ. ಕೇರಳದಲ್ಲಿ–ಹಿಲ್‌ಪುಲಯ, ಅಲರ್ ಇತರೆ. ಕರ್ನಾಟಕದಲ್ಲಿ 50 ಬುಡಕಟ್ಟುಗಳನ್ನು ಕೇಂದ್ರಸರ್ಕಾರವು ಅಧಿಕೃತಪಟ್ಟಿ ಮಾಡಿದೆ. ಗೊಂಡ, ಹಾಲಕ್ಕಿ, ಸಿದ್ಧಿ, ಕಾಡುಕುರುಬ, ಜೇನುಕುರುಬ,ಸೋಲಿಗ,

ಕೊರಗಇತರೆ. ಆದರೆ ಬುಡಕಟ್ಟುಗಳ ಲಕ್ಷಣವನ್ನು ಹೊಂದಿರುವ ಹಲವಾರು ಬುಡಕಟ್ಟುಗಳನ್ನು ಸರ್ಕಾರವು ಬುಡಕಟ್ಟುಗಳ ಪಟ್ಟಿಯಿಂದ ನಿರಾಕರಿಸಿದೆ. ಅವುಗಳೆಂದರೆ: ಕಾಡುಗೊಲ್ಲ, ಹಕ್ಕಿಪಿಕ್ಕಿ, ಗೌಳಿಗ ಇತರೆ.

ಬುಡಕಟ್ಟು ಸಂಸ್ಕೃತಿ ಮತ್ತು ಆಚರಣೆಗಳು: ಬುಡಕಟ್ಟುಗಳಲ್ಲಿ ತಮ್ಮದೇ ಆದ ರೂಢಿ–ಸಂಪ್ರದಾಯಗಳು, ವೇಶಭೂಷಣ, ಆಹಾರಪದ್ಧತಿಗಳು, ಆಚರಣೆಗಳನ್ನು ಕಾಣಬಹುದು. ಬುಡಕಟ್ಟು ಕುಟುಂಬದಲ್ಲಿ ಆಚರಣೆಗಳಲ್ಲಿ ಮಹಿಳೆಯರಿಗೆ ಪ್ರಧಾನ ಪಾತ್ರವಿರುವುದು ಕಂಡುಬರುತ್ತದೆ. ಉದಾ:ಖಾಸಿ ಬುಡಕಟ್ಟುಗಳಲ್ಲಿ ಮಹಿಳೆಯರಿಗೆ ಪ್ರಮುಖ ಸ್ಥಾನವಿರುತ್ತದೆ. ಸಾವಿನ ಸಂದರ್ಭದಲ್ಲಿ ಕುಟುಂಬದ ಮಗಳು ವಿದಿವಿಧಾನ ಕಾರ್ಯಗಳಲ್ಲಿ ತೊಡಗುತ್ತಾಳೆ. ಪೂಜೆಮಾಡುವುದು, ಸಂಸ್ಕೃತಿಯನ್ನು ರಕ್ಷಿಸುವುದು ಮಹಿಳೆಯರಿಗೆ ಮೀಸಲಾಗಿರುತ್ತದೆ. ಆದರೆ ಕೆಲವು ಹಬ್ಬಗಳಲ್ಲಿ, ಸಾವಿನ ಸಂದರ್ಭದಲ್ಲಿ ಪೂಜೆ ಕಾರ್ಯಗಳಲ್ಲಿ ಮಹಿಳೆಯರಿಗೆ ಅವಕಾಶವಿರುವುದಿಲ್ಲ ಉದಾ: ತೋಡರು ಸಾವಿನ ಸಂದರ್ಭದಲ್ಲಿ ಕಾರ್ಯಗಳಲ್ಲಿ ಮಹಿಳೆಯರನ್ನು ಸಂಪೂರ್ಣ ದೂರವಿಡುತ್ತಾರೆ. ಹೆಚ್ಚಿನ ಬುಡಕಟ್ಟುಗಳು ಪಿತೃಪ್ರಧಾನ ಕುಟುಂಬಗಳಾಗಿವೆ. ಬುಡಕಟ್ಟು ಸಮುದಾಯಗಳು ಪದ್ಧತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಋತುಮತಿ, ಹೆರಿಯಗೆಯ ಸಮಯದಲ್ಲಿ ಅಸ್ಪೃಶ್ಯತೆ, ಸೂತಕಪದ್ಧತಿಗಳನ್ನು ತಮ್ಮ ತಮ್ಮ ಸಮುದಾಯಗಳಂತೆ ಆಚರಿಸುತ್ತಾರೆ. ಋತುಮತಿಯಾದ ಹೆಣ್ಣನ್ನು ಅಪಾಯ ಎನ್ನುವಂತೆ ಧಾರ್ಮಿಕ ಚಟುವಟಿಕೆಗಳಿಂದ ದೂರವಿಡುತ್ತಾರೆ. ಸೂತಕ ಪದ್ಧತಿಯನ್ನು ಬುಡಕಟ್ಟುಗಳು ಹೆಚ್ಚು ಆಚರಿಸುವುದರ ಜೊತೆಗೆ ಮಹಿಳೆಯರನ್ನು ಸೂತಕ ಕಳೆಯುವರೆಗೂ ತಮ್ಮ ಮನೆಯಿಂದ, ಹಟ್ಟಿಗಳಿಂದ ಹೊರಗೆ ಇರಿಸಿತ್ತಾರೆ. ಹೀಗೆ ಬುಡಕಟ್ಟುಗಳ ಸಂಸ್ಕೃತಿಯಲ್ಲಿ ಮಹಿಳೆ ಹೆಚ್ಚು ಪಾಲ್ಗೊಂಡರು ಅದು ಪುರುಷನ ಅಧಿಕಾರದ ಮೇಲೆ, ಒಪ್ಪಿಗೆಯ ಮೇಲೆ ನಿಂತಿದೆ.

ಬುಡಕಟ್ಟುಗಳ ಶೈಕ್ಷಣಿಕ, ಆರ್ಥಿಕ ಸ್ಥಾನಮಾನ ಮತ್ತು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರ್ಕಾರದ ಪಾತ್ರ : ಬುಡಕಟ್ಟುಗಳು ಹೆಚ್ಚು ಅನಕ್ಷರಸ್ಥರಾಗಿದ್ದು ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಇವರ ಒಟ್ಟು ಸಾಕ್ಷರತಾ ಪ್ರಮಾಣ 73% ರಷ್ಟಿದ್ದು ಮಹಿಳೆಯರ ಸಾಕ್ಷರತಾ ಪ್ರಮಾಣ 42% ರಷ್ಟಿದೆ(2011 ರ ಜನಗಣತಿ ಪ್ರಕಾರ). ಅನರಕ್ಷತೆಯಿಂದ ಉದ್ಯೋಗವು ಸಿಗದೆ ಕೃಷಿಕರಾಗಿ, ಪಶುಪಾಲಕರಾಗಿ, ವಲಸೆಕಾರ್ಮಿಕರಾಗಿ ದುಡಿಯುತ್ತಿರುವುದನ್ನು ಕಾಣಬಹುದು. ದೇಶದ ಆರ್ಥಿಕತೆಯಲ್ಲಿ ಬುಡಕಟ್ಟುಗಳ ಪಾತ್ರವನ್ನು ಕಡೆಗಣಿಸಲಾಗಿದೆ. ಬುಡಕಟ್ಟುಗಳು ಮತ್ತು ಅಲೆಮಾರಿಬುಡಕಟ್ಟುಗಳು ಅತೀ ಬಡತನ, ಅನಾರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರವು ಬುಡಕಟ್ಟುಗಳಿಗಾಗಿ ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿಯು ದೊರಕದೆ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ, ಇನ್ನೂ ಕೆಲವು ಬುಡಕಟ್ಟುಗಳನ್ನು ಬುಡಕಟ್ಟುಗಳ ಪಟ್ಟಿಗೆ ಸೇರಿಸಲು ನಿರಾಕರಿಸಲಾಗಿದೆ. ಬುಡಕಟ್ಟುಗಳ ಬಗ್ಗೆ ಸರಿಯಾದ ಸಮೀಕ್ಷೆಗಳು ನಡೆಯದೆ ಹಲವಾರು ಬುಡಕಟ್ಟುಗಳು ಸರ್ಕಾದ ಪಟ್ಟಿಯಿಂದ ಕಣ್ಮರೆಯಾಗಿದ್ದಾರೆ.

ಬುಡಕಟ್ಟುಗಳನ್ನು ಕಾಡುಗಳಿಂದ ಹೊರಹಾಕವುದರಲ್ಲಿ ಅಂತರಾಷ್ಟ್ರೀಯವಾಗಿ ಸ್ಥಳಾಂತರಿಸುವ ಕಾರ್ಯಗಳು ಬ್ರೀಟಿಷರ ಕಾಲದಲ್ಲಿಯೇ ನಡೆದಿದ್ದನ್ನು ನೋಡಬಹುದು. ಇಂದು ಈ ಜಾಗತೀಕರಣದ ಹಿನ್ನಲೆಯಲ್ಲಿ ಸರ್ಕಾರವು ಬಂಡವಾಳಶಾಹಿ ಗಳನ್ನು ಆಹ್ವಾನಿಸಿ ಕಾಡುಗಳನ್ನು ಆಕ್ರಮಿಸುವಲ್ಲಿ ಮುಂದಾಗಿವೆ. 'ಅರಣ್ಯನೀತಿ' ಇದರಿಂದಲೂ ಕಾಡಿನಲ್ಲಿ ವಾಸಿಸುತ್ತಿರುವ ಹಲವಾರು ಬುಡಕಟ್ಟುಗಳ ಜೀವನ ಅಸ್ತವ್ಯಸ್ತವಾಗಿದೆ. ಕೆಲ ಬುಡಕಟ್ಟುಗಳನ್ನು ಒತ್ತಾಯಪೂರ್ವಕವಾಗಿ ಕಾಡುಗಳಿಂದ ಹೊರಗೆ ಹಾಕಲಾಗುತ್ತಿದೆ. ಈ ಆಧುನಿಕ ಸಮಾಜದಲ್ಲಿ ತಮ್ಮ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಎಂದು ಒದ್ದಾಡುತ್ತಿರುದನ್ನು ನೋಡಬಹುದು. ತಮ್ಮ ಸಮುದಾಯಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವವರನ್ನು ಉಗ್ರರೆಂದು ಹಿಂಸೆ ನೀಡುತ್ತಿರುವುದು ಹೆಚ್ಚಾಗಿವೆ. ಕಾಡಿನ ಸಂಪತ್ತು ಬುಡಕಟ್ಟುಗಳಿಗೆ ಸಂವಿಧಾನ ಬದ್ಧವಾಗಿದ್ದರೂ ಇದನ್ನು ಕಡೆಗಣಿಸಿ ಸರ್ಕಾರಗಳೇ ಲಾಭಕ್ಕಾಗಿ ಬಂಡವಾಳಶಾಹಿಗಳ ಜೊತೆಗೂಡಿ ಕಾಡುಗಳನ್ನು ನಾಶಮಾಡಿ ಕಾರ್ಖಾನೆಗಳನ್ನು ನಿರ್ಮಿಸುವಲ್ಲಿ ಮುಂದಾಗಿವೆ.

ಕಾಡುಗೊಲ್ಲ ಬುಡಕಟ್ಟು ಸಮುದಾಯ: ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾದ ಕಾಡುಗೊಲ್ಲರು ಭಾರತದಲ್ಲಿ ಆಂದ್ರಪ್ರದೇಶ, ತಮಿಳುನಾಡು, ಕರ್ನಾಟಕದಲ್ಲಿ ಹೆಚ್ಚು ನೆಲೆಸಿದ್ದಾರೆ. ಆಂಧ್ರಪ್ರದೇಶದಲ್ಲಿ ಇವರನ್ನು 'ಯಾದವ' ರೆಂದು, ಕರ್ನಾಟಕದಲ್ಲಿ ಕಾಡುಗೊಲ್ಲರೆಂದು ಕರೆಯಾಲಾಗುತ್ತದೆ. ಕಾಡುಗೊಲ್ಲರು ಸಾಮಾನ್ಯವಾಗಿ ಕನ್ನಡವನ್ನೇ ಮಾತಾನಾಡುತ್ತಾರೆ. ಕರ್ನಾಟಕದ ಕೆಲ ಆಂಧ್ರಪ್ರದೇಶದ ಕಾಡುಗೊಲ್ಲರು ತೆಲುಗುಭಾಷೆಯನ್ನು ವ್ಯವಹಾರಿಕವಾಗಿ ಬಳಸುತ್ತಾರೆ.ಕರ್ನಾಟಕದ ಕಾಡುಗೊಲ್ಲರು ಮತ್ತು ಆಂಧ್ರಮೂಲದ ಊರುಗೊಲ್ಲರು ಸಾಂಸ್ಕೃತಿಕವಾಗಿ ಒಂದೇ ಮೂಲಕ್ಕೆ ಸೇರಿದವರಲ್ಲ. ಇವರಿಬ್ಬರ ಮಧ್ಯೆ ಯಾವುದೇ ಸಂಬಂಧಗಳಿಲ್ಲ. ಊರುಗೊಲ್ಲರು ಒಂದು ಜಾತಿಯಾದರೆ, ಕಾಡುಗೊಲ್ಲರು ಒಂದು ಬುಡಕಟ್ಟು.

'ಗೊಲ್ಲ' ಎಂಬ ಪದವು 'ಗೋವಲ' ಪದದಿಂದ ಬಂದಿದ್ದು ಇದಕ್ಕೆ ಕಾಡು ಜೋಡಣೆಯಾಗಿ ಕಾಡುಗೊಲ್ಲರಾಗಿದ್ದಾರೆ. ಕಾಡುಗೊಲ್ಲರು ದೆಹಲಿ ಮೂಲವರೆಂದು ಅಲ್ಲಿನ ಮುಸ್ಲಿಂರ ಉಪಟಳದಿಂದ ಎಲ್ಲಿ ನಮ್ಮ ಹಾಲಿನಂತಹ ಕುಲ ನೀರಾಗಿಬಿಡುತ್ತದೆಯೋ ಎಂದು ಹೆದರಿ ದಕ್ಷಿಣದತ್ತ ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ಬುಡಕಟ್ಟುಗಳಾದ ಕಾಡುಗೊಲ್ಲರು ಭಾರತದಾದ್ಯಂತ ಹಲವಾರು ಜಿಲ್ಲೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ .ಇತರೆ. ಕರ್ನಾಟಕದಲ್ಲಿ ಹಾಸನ, ಕೋಲಾರ ಬಳ್ಳಾರಿ, ದಾವಣಗೆರೆ (2ಲಕ್ಷ). ತುಮಕೂರು (2,50000) ಬೆಂಗಳೂರು ಗ್ರಾಮಾಂತರ (1,80,000) ಹಾಗೂ ಚಿತ್ರದುರ್ಗದಲ್ಲಿ 5 ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವುದು ಕಂಡುಬರುತ್ತದೆ. (ಬಿಸಿಎಮ್ ವರದಿ ಪ್ರಕಾರ).

ಆದರೆ ಕಾಡುಗೊಲ್ಲರು ಎಷ್ಟೋ ವರ್ಷಗಳ ಹಿಂದೆಯೇ ಕರ್ನಾಟಕದಲ್ಲಿ ನೆಲೆಸಿದ್ದಾರೆ ಎಂದು ಮೂಲಗಳು ತಿಳಿಸುತ್ತದೆ. ಕೆಲವು ಆಧಾರದ ಮೇಲೆ ಕಾಡುಗೊಲ್ಲರು ಆಂಧ್ರದ ಮೂಲದವರು, ತಮ್ಮ ಪಶುಗಳೊಂದಿಗೆ ಕರ್ನಾಟಕದ ಚಿತ್ರದುರ್ಗದತ್ತ ಹೆಚ್ಚು ವಲಸೆ ಬಂದಿರುವುದಾಗಿ ತಿಳಿಸುತ್ತದೆ. (ಸಂಸ್ಕೃತಿ ಮಹಿಳಾ ಮಾಲಿಕೆ ಪುಟ 10). ಹೀಗೆ ಅಲೆಮಾರಿಗಳಾಗಿದ್ದವರು ಕಾಡಿನಲ್ಲಿ ಜೀವಿಸುತ್ತಾ ನಂತರ ಹಟ್ಟಿಗಳನ್ನು ಕಟ್ಟಿಕೊಂಡು ನೆಲೆನಿಲ್ಲತೊಡಗಿದರು. ಅಲೆಮಾರಿಗಳಾಗಿ ಪಶುಸಂಪತ್ತು ಕ್ಷೀಣಿಸತೊಡಗಿದಂತೆ ಕುರಿಸಾಗಣಿಕೆಗೆ ಇಳಿದು ಕೃಷಿಮಾಡುತ್ತಾ ಪಶುಸಂಗೋಪನೆಯನ್ನು ಮುಂದುವರೆಸುತ್ತಾ ಸ್ಥಿರನೆಲೆಯಲ್ಲಿ ನಿಲ್ಲತೊಡಗಿರುವುದು ಕಂಡುಬರುತ್ತದೆ. ಕಾಡಿನ ಅಂಚಿನಲ್ಲಿ ಊರಿನಿಂದ ದೂರದಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡು ತಮ್ಮ ಹಟ್ಟಿಯ ಸುತ್ತಲೂ ಎತ್ತರದ ಬೇಲಿಗಳಿಂದ ಮುಚ್ಚಿರುತ್ತಾರೆ. ಇದರಿಂದ ಇವರನ್ನು ಹಟ್ಟಿಗೊಲ್ಲರೆಂದು ಸಹ ಕರೆಯುತ್ತಾರೆ. ಅಸ್ಪೃಶ್ಯತೆಯನ್ನು ಹೆಚ್ಚಾಗಿ ಆಚರಿಸುವ ಕಾಡುಗೊಲ್ಲರು ಮಾದಿಗರನ್ನು ತಮ್ಮ ಹಟ್ಟಿಯೊಳಗೆ ಬಿಡುವಿದಿಲ್ಲ. ಅತ್ಯಂತ ಕಟ್ಟುನಿಟ್ಟಾಗಿ ತಮ್ಮ ಪದ್ಧತಿಗಳನ್ನು ಪ್ರಾಚೀನ ಕಾಲದಿಂದಲೂ ಇಲ್ಲಿಯವರೆಗೂ ನಡೆಸಿಕೊಂಡಿರುವ ಬುಡಕಟ್ಟುಗಳಲ್ಲಿ ಕಾಡುಗೊಲ್ಲ ಸಮುದಾಯವು ಒಂದಾಗಿದೆ. ಮಡಿ, ಮೈಲಿಗೆ ಸೂತಕ ಪದ್ಧತಿಗಳನ್ನು ನಿಯಮಗಳಂತೆ ಪಾಲಿಸುವುದು ಕಂಡುಬರುತ್ತದೆ. ಈ ಪದ್ಧತಿಗಳು, ಸೂತಕದ ಅಚರಣೆಗಳು ಪ್ರಸ್ತುತ ದಿನಮಾದಲ್ಲಿ ಎಷ್ಟರಮಟ್ಟಿಗೆ ಪ್ರಚಲಿತದಲ್ಲಿದೆ ಹಾಗೂ ಮಹಿಳೆಯರ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬುದನ್ನು ನೋಡಬೇಕಿದೆ.

ಕಾಡುಗೊಲ್ಲರನ್ನು ಮೊದಲಿಗೆ ನೊಮೋಡಿಕ್‌ಟ್ರೈಬ್(ಅಲೆಮಾರಿ ಬುಡಕಟ್ಟು), ನಂತರ ಸೆಮಿ ನೊಮೋಡಿಕ್‌ಟ್ರೈಬ್ (ಅರೆ ಅಲೆಮಾರಿಬುಡಕಟ್ಟು),ಈಗ ಬ್ಯಾಕ್ವರ್ಡ್ ಟ್ರೈಬ್(ಹಿಂದುಳಿದ ಬುಡಕಟ್ಟು), ಪ್ರವರ್ಗ1 ಎಂದು ಕರೆಯಾಲಾಗುತ್ತಿದೆ. ಅನೇಕ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡಿರುವುದರಿಂದ ಕಾಡುಗೊಲ್ಲರನ್ನು ಬುಡಕಟ್ಟು ಎಂದು ಕರೆಯಲಾಗಿತ್ತಿದ್ದು ನಿರ್ದಿಷ್ಟವಾಗಿ ಯಾವ ವರ್ಗಕ್ಕೆ ಸೇರುತ್ತಾರೆ ಎಂಬುದರ ಬಗ್ಗೆ ಗೊಂದಲಗಳು ಇವೆ. ಕರ್ನಾಟಕದ ಬುಡಕಟ್ಟುಗಳ ಪಟ್ಟಿಯಲ್ಲಿ ಇವರನ್ನು ಸೇರಿಸದೆ ಇರುವುದರಿಂದ ಸರ್ಕಾರದ ಬುಡಕಟ್ಟು ಯೋಜನೆಗಳನ್ನು, ಸೌಲಭ್ಯಗಳನ್ನು ಪಡೆಯುವುದರಲ್ಲಿ ವಂಚಿತರಾಗಿದ್ದಾರೆ. ಕಾಡುಗೊಲ್ಲರು ಅನಕ್ಷರಸ್ಥರಾಗಿದ್ದು ಸೌಲಭ್ಯಗಳ ಬಗ್ಗೆ ಮಾಹಿತಿಯು ಇಲ್ಲದೆ ಆರ್ಥಿಕವಾಗಿ,ಸಾಮಾಜಿಕವಾಗಿ,ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಅದರಲ್ಲಿಯೂ ಕಾಡುಗೊಲ್ಲ ಮಹಿಳೆಯರು ಅನಕ್ಷರತೆಯಿಂದಾಗಿ ಮತ್ತು ಪುರುಷ ಆಚರಣೆಗಳಿಗೆ ಒಳಗಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಸಾಧ್ಯತೆ ಹೆಚ್ಚಿರುತ್ತದೆ.

ಅಧ್ಯಯನದ ಉದ್ದೇಶಗಳು:–

1) ಕಾಡುಗೊಲ್ಲ ಸಮುದಾಯದ ಐತಿಹಾಸಿಕ ಹಿನ್ನಲೆ ಮತ್ತು ಜೀವನ ಶೈಲಿಯನ್ನು ತಿಳಿಯುವುದು.
2) ಲಿಂಗತ್ವ, ಜಾತಿ, ವರ್ಗದ ಹಿನ್ನಲೆಯಲ್ಲಿ ಕಾಡುಗೊಲ್ಲ ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಸ್ಥಾನವನ್ನು ಪರಿಶೀಲಿಸುವುದು.
3) ಕಾಡುಗೊಲ್ಲ ಮಹಿಳೆಯರ ಶೈಕ್ಷಣಿಕ, ಆರ್ಥಿಕ ಮತ್ತು ಆರೋಗ್ಯ ಮಟ್ಟವನ್ನು ತಿಳಿಯುವುದು
4) ಜಿಲ್ಲೆಯ ಸಂಬಂಧ ವಿವಿಧ ಇಲಾಖೆ ಹಾಗೂ ಕಛೇರಿಗಳಲ್ಲಿ ದೊರಕುವ ಅಂಕಿ–ಅಂಶಗಳನ್ನು ಸಂಗ್ರಹಿಸಿ ಮಹಿಳೆಯರು ಸೇರಿದಂತೆ ಗೊಲ್ಲಸಮುದಾಯದ ಸಂಖ್ಯಾಶಾಸ್ತ್ರೀಯ ಚಿತ್ರಣವನ್ನು ಪಡೆಯುವುದು.
5) ಸರ್ಕಾರದ ಬುಡಕಟ್ಟು ಯೋಜನೆಗಳು ಕಾಡುಗೊಲ್ಲ ಮಹಿಳೆಯರನ್ನು ಎಷ್ಟರ ಮಟ್ಟಿಗೆ ತಲುಪಿದೆ ಅನ್ನುವುದನ್ನು ಪರಿಶೀಲಿಸುವುದು.

ಅಧ್ಯಯನದ ಮಹತ್ವ:

'ಪ್ರಸ್ತುತ ಅಧ್ಯಯನವು ಲಿಂಗತ್ವ ಮತ್ತು ಬುಡಕಟ್ಟು' ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಮಹಿಳೆಯರ ಸಮಗ್ರ ಅಧ್ಯಯನ ಕುರಿತಾಗಿದೆ. ಕೆಲವು ಸಮುದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮುಂದುವರೆದಿದ್ದರೂ ಹಲವಾರು ಸಮುದಾಯಗಳು ತೀರ ಹಿಂದುಳಿದಿದೆ. ಇನ್ನೂ ಕೆಲವು ಬುಡಕಟ್ಟುಗಳು ಅಭಿವೃದ್ಧಿಯ ಹಾದಿಯಲ್ಲಿ ಸಾಗಲು ಮುಂದಾಗಿವೆ. ಹೀಗೆ ಬುಡಕಟ್ಟು ಸಮುದಾಯಗಳು ತಮ್ಮ ಬೆಳವಣಿಗೆಗೆ, ಅಭಿವೃದ್ಧಿಗೆ ಈ ಆಧುನಿಕತೆಯಲ್ಲಿ ಮುಂದಾಗುತ್ತಿದ್ದರು ಹಲವಾರು ಸಮಸ್ಯೆಗಳನ್ನು ಎದುರುಸುತ್ತಿರುವುದನ್ನು ಕಾಣಬಹುದು. ಇಂತಹ ಬುಡಕಟ್ಟುಗಳ ಬಗ್ಗೆ ಸಮಾಜಕ್ಕೆ ಪರಿಚಯಿಸಲು ಹಲವಾರು ಅಧ್ಯನಗಳು ನಡೆಯುತ್ತಿರುದರಿಂದ ಇವರ ಪರಿಸ್ಥಿತಿ, ಜೀವನ ಶೈಲಿಯನ್ನು ತಿಳಿಯಲು ಸಹಾಯವಾಗಿದೆ.

ಬುಡಕಟ್ಟುಗಳ ಬಗ್ಗೆ, ಬುಡಕಟ್ಟುಗಳ ಪರಿಚಯ, ಆಚರಣೆಗಳನ್ನು ಸಂಸ್ಕೃತಿ, ಸ್ಥಾನಮಾನದ ಬಗ್ಗೆ ಹಲವಾರು ಅಧ್ಯಯನಗಳನ್ನು ಕೈಗೊಂಡು ಪರಿಚಯ ಮಾಡಿರುವುದನ್ನು ಕಾಣಬಹುದು. ಇದುವರೆಗೆ ಕಾಡುಗೊಲ್ಲ ಬುಡಕಟ್ಟುಗಳ ಬಗ್ಗೆ, ಸಾಂಸ್ಕೃತಿಕ, ಸಾಮಾಜಿಕ, ಜಾನಪದ, ಭಾಷಶಾಸ್ತ್ರದ ದೃಷ್ಟಿಕೋನದಿಂದ ಹೆಚ್ಚಾಗಿ ಅಧ್ಯಯನಗಳು ನಡೆದಿವೆ. ಅದರಲ್ಲೂ ಕಾಡುಗೊಲ್ಲ ಮಹಿಳೆಯರ ಬಗ್ಗೆ ಕೆಲವೇ ಕೆಲವು ಅಧ್ಯಯನ ನಡೆದಿವೆ. ಕಾಡುಗೊಲ್ಲ ಸಂಸ್ಕೃತಿಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಸಾಂಸ್ಕೃತಿಕ ಹಿನ್ನಲೆಯಲ್ಲಿ ಅಧ್ಯಯನ ನಡೆದಿದೆ. (ಮಹಿಳಾ ಸಂಸ್ಕೃತಿ ಮಾಲಿಕೆ. ಡಾ॥ ಗೀತಾ ನಾಗಭೂಷಣ) ಆದರೆ ಕಾಡುಗೊಲ್ಲ ಮಹಿಳೆಯರ ಸ್ಥಾನ, ಪಾತ್ರ ಕುರಿತು ಅದರಲ್ಲಿಯೂ ಚಿತ್ರದುರ್ಗಜಿಲ್ಲೆಯ ಕಾಡುಗೊಲ್ಲ ಮಹಿಳೆಯರ ಬಗ್ಗೆ ಅಧ್ಯಯನಗಳು ನಡೆದಿಲ್ಲ. ಕಾಡುಗೊಲ್ಲ ಮಹಿಳೆಯರ ಸ್ಥಾನ, ದುಡಿಮೆ, ಸಾಂಸ್ಕೃತಿಕ ಆಚರಣೆಗಳು ಬೀರುವ ಪ್ರಭಾವ, ಮುಂತಾದ ಅಂಶಗಳನ್ನು ಪರಿಶೋಧಿಸುವ ಅದರಲ್ಲಿಯೂ ವಿಶೇಷವಾಗಿ **ಸ್ತ್ರೀವಾದಿ** ದೃಷ್ಟಿಕೋನದಿಂದ ಕಾಡುಗೊಲ್ಲ ಮಹಿಳೆಯರ ಕೌಟುಂಬಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯಮಟ್ಟ ಸಾಮಾಜಿಕ ಸ್ಥಾನಮಾನ ಕುರಿತಂತೆ ಅಧ್ಯಯನ ಮಾಡುವ ಅವಶ್ಯಕತೆಯಿದೆ.

ಅಧ್ಯಯನದ ವೈಧಾನಿಕತೆ:

'ಲಿಂಗತ್ವ ಮತ್ತು ಬುಡಕಟ್ಟು ಸಮುದಾಯ' ಕಾಡುಗೊಲ್ಲ ಮಹಿಳೆಯರ ಕುರಿತು ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು ಮತ್ತು ಮಾಹಿತಿ ಸಂಗ್ರಹಣೆ ಮಾಡಲು ಈ ಅಧ್ಯಯನಕ್ಕೆ ಸೂಕ್ತವಾದ ವೈಧಾನಿಕತೆಗಳನ್ನು ಅಳವಡಿಸಿಕೊಳ್ಳಲಾಗುವುದು.

ಅಧ್ಯಯನ ಕ್ಷೇತ್ರ:-

ಕರ್ನಾಟಕವು ಪ್ರಸ್ತುತ 30 ಜಿಲ್ಲೆಗಳನ್ನು ಒಳಗೊಂಡಿದ್ದು ಅದರಲ್ಲಿ ಚಿತ್ರದುರ್ಗ ಜಿಲ್ಲೆಯು ಒಂದಾಗಿದೆ. ಅತೀ ಪ್ರಾಚೀನ ಚರಿತ್ರೆ ಹೊಂದಿದ ಜಿಲ್ಲೆಯಾಗಿದೆ. ಮಧ್ಯಕರ್ನಾಟಕದಲ್ಲಿರುವ ಚಿತ್ರದುರ್ಗ ಉತ್ತರಕರ್ನಾಟಕ ಮತ್ತು ದಕ್ಷಿಣಕರ್ನಾಟಕಕ್ಕೆ ಸೇತುವೆಯಾಗಿದೆ. ಹಾಗೂ ಬೆಂಗಳೂರು ವಿಭಜಿತ ಜಿಲ್ಲೆಯು ಆಗಿದೆ. ಪೂರ್ವಕ್ಕೆ ತುಮಕೂರು, ಪಶ್ಚಿಮಕ್ಕೆ ದಾವಣಗೆರೆ, ಉತ್ತರಕ್ಕೆ ಬಳ್ಳಾರಿ ದಕ್ಷಿಣಕ್ಕೆ ಚಿಕ್ಕಮಂಗಳೂರಿನಿಂದ ಆವರಿಸ್ಪಲಟ್ಟಿದೆ. ಬ್ರಿಟೀಷರ ಕಾಲದಲ್ಲಿ 'ಚಿಟಲ್‌ಡ್ರುಗ್' ಎಂದು ಅದಕ್ಕೂ ಹಿಂದೆ ಸೀತಳ, ಚಿತ್ರಕಲ್ಲುದುರ್ಗ, ಚಿತ್ತರಕಲ್ಲು, ಬೊಮ್ಮತನಕಲ್ಲು ಎಂದು ಸಹ ಕರೆಯಾಲಾಗುತಿತ್ತು. ನಂತರ ಮೈಸೂರು ಸಂಸ್ಥಾನ ಕಾಲದಿಂದ ಇದನ್ನು 'ಚಿತ್ರದುರ್ಗ' ಎಂದು ಕರೆಯಾಲಾಗುತ್ತಿದೆ. ಪಾಳೆಗಾರರಾದ ಮದಕರಿನಾಯಕರು ಈ ಚಿತ್ರದುರ್ಗ ನಿರ್ಮಾಣದಲ್ಲಿ ಪ್ರಮುಖರಾಗಿದ್ದಾರೆ. ವೀರವನಿತೆ ಒನಕೆ ಓಬವ್ವ ವೀರವೇಶದಿಂದ ಹೋರಾಡಿ ಮಡಿದ ಭೂಮಿಯಾಗಿದೆ.

ಚಿತ್ರದುರ್ಗವು 6 ತಾಲ್ಲೂಕುಗಳನ್ನು ಒಳಗೊಂಡಿದ್ದು(ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ,ಚಳ್ಳಕೆರೆ, ಮೊಳಕಲ್ಮೂರು, ಹಿರಿಯೂರು) ಇದರ ಭೂ ವಿಸ್ತೀರ್ಣ 8436(ಚ,ಕಿ.ಮಿ.ಗೆ). ಒಟ್ಟು ಜನಸಂಖ್ಯೆ 18,18,420 (2011 ಜನಗಣತಿ ಪ್ರಕಾರ). ಹೆಚ್ಚು ಕಣಶಿಲೆಯ ಬೆಟ್ಟಗಳಿಂದ ಕೂಡಿದ ಬಯಲುಸೀಮೆ ಪ್ರದೇಶವಾಗಿದೆ. ಇಲ್ಲಿ ಮಳೆಯ ಪ್ರಮಾಣ 479mm ನಷ್ಟಿದೆ. ಅತೀ ಕಡಿಮೆ ಮಳೆ ಬೀಳುವ ಪ್ರದೇಶವಾಗಿದ್ದು ರಾಜ್ಯದ ಅತೀ ಚಳಿ ದಾಖಲಾಗುವ ಜಿಲ್ಲೆಯು ಆಗಿದೆ. ಮಳೆ ಪ್ರಮಾಣ ಕಡಿಮೆ ಇರುವುದರಿಂಂದ ಹೆಚ್ಚಾಗಿ ಒಣಬೇಸಾಯವನ್ನು ಅವಲಂಬಿಸಿದ್ದಾರೆ. ಇಲ್ಲಿನ ಸಾಕ್ಷರತಾಮಟ್ಟ ಗಂಡು74%. ಹೆಣ್ಣು 69%. ಲಿಂಗಾನುಪಾತ 969 (1000 ಪುರುಷರಿಗೆ 969 ಮಹಿಳೆಯರು) ಹೆಣ್ಣುಮಕ್ಕಳ ಸಾಕ್ಷರತಾ ಮಟ್ಟ ಮತ್ತು ಲಿಂಗಾನುಪಾತದಲ್ಲಿಯೂ ಹೆಚ್ಚಿನ ವ್ಯತ್ಯಾಸ ಇದ್ದು, ಮಾನವ ಅಭಿವೃದ್ಧಿ ಸೂಚ್ಯಂಕ 0.445 (2011 ಜನಗಣತಿ ಪ್ರಕಾರ) ಕಡಿಮೆ ಇರುವುದನ್ನು ಕಾಣಬಹುದು.

ಹೆಚ್ಚು ಬಯಲುಸೀಮೆ ಪ್ರದೇಶ, ಕಾಡುಪ್ರದೇಶ ಇರುವುದರಿಂದ ಇಲ್ಲಿ ಬುಡಕಟ್ಟುಜನರು ಹೆಚ್ಚಾಗಿ ಕಂಡುಬರುತ್ತಾರೆ. ಅದರಲ್ಲಿಯೂ ಕಾಡುಗೊಲ್ಲರು ಯತೇಚ್ಚವಾಗಿ ಇಲ್ಲಿ ನೆಲೆಸಿದ್ದು, ಕಾಡುಗೊಲ್ಲ ಜನಸಂಖ್ಯೆಯಲ್ಲಿ ಕರ್ನಾಟಕದ ಮೊದಲ ಜಿಲ್ಲೆಯಾಗಿದೆ.(ಬಿಸಿಎಮ್ ವರದಿ ಪ್ರಕಾರ 5ಲಕ್ಷ ಕಾಡುಗೊಲ್ಲ ಜನಸಂಖ್ಯೆಯನ್ನು ಒಳಗೊಂಡಿದೆ). ಪಶುಸಂಗೋಪನೆಗೆ ಸೂಕ್ತವಾಗಿರುವುದರಿಂದ ಕಾಡುಗೊಲ್ಲರು ಚಿತ್ರದುರ್ಗದಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಅತೀ ಕಡಿಮೆ ಮಳೆ ಬೀಳುವುದರಿಂದ ಕಾಡುಗೊಲ್ಲರು ಒಣಬೇಸಾಯವನ್ನು ಅನುಸರಿಸುತ್ತಿದ್ದಾರೆ. ಸರ್ಕಾರದ ಬುಡಕಟ್ಟು ಪಟ್ಟಿಯಿಂದ ಕಾಡುಗೊಲ್ಲರನ್ನು ನಿರ್ಲಕ್ಷಿಸುತ್ತಿದ್ದು ಇವರನ್ನು ಯಾವ ವರ್ಗಕ್ಕೆ ಸೇರಿಸಬೇಕೆಂಬ ಗೊಂದಲಗಳು ನಡೆಯುತ್ತಲೇ ಇವೆ. ಇದರಿಂದ ಸರ್ಕಾರದ ಸೌಲಭ್ಯಗಳನ್ನು ಪಡೆಯಾಲಾಗದೆ ಶಿಕ್ಷಣ, ಉದ್ಯೋಗ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿದ್ದು ಆರ್ಥಿಕವಾಗಿ, ಸಾಮಾಜಿಕವಾಗಿ. ಶೈಕ್ಷಣಿಕವಾಗಿ ಕಾಡುಗೊಲ್ಲರು ಹಿಂದುಳಿದಿರುವ ಸಾಧ್ಯತೆ ಇದ್ದು, ಚಿತ್ರದುರ್ಗದ ಕಾಡುಗೊಲ್ಲ ಮಹಿಳೆಯರ ಆರ್ಥಿಕ, ಸಾಮಾಜಿಕ, ಕೌಟುಂಬಿಕ, ಶೈಕ್ಷಣಿಕಮಟ್ಟ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲರ ಹಟ್ಟಿಗಳನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ದುಕೊಳ್ಳಲಾಗಿದೆ.



ನಮೂನೆಆಯ್ಕೆ:



ಪ್ರತಿ ತಾಲ್ಲೂಕಿನಲ್ಲಿ ಅಂದಾಜು ಸರಾಸರಿ 50–60 ಹಟ್ಟಿಗಳು ಕಂಡುಬರುತ್ತವೆ. ಅವುಗಳಲ್ಲಿ 10 ಹಟ್ಟಿಗಳನ್ನು ಜಿಲ್ಲಾ ಮತ್ತು ತಾಲ್ಲೂಕೂ ಕೇಂದ್ರದಿಂದ ಇರುವ ದೂರವನ್ನು ಆಧರಿಸಿ ಹತ್ತಿರವಿರುವ ದೂರ, ಅತ್ಯಂತ ದೂರವಿರುವ (ಇಂಟೀರಿಯರ್) ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವ ಗೊಲ್ಲರ ಹಟ್ಟಿಗಳನ್ನು ಆಯ್ಕೆಮಾಡಿಕೊಳ್ಳಲಾಗುವುದು. ಪ್ರತಿ ತಾಲ್ಲೂಕಿನಿಂದ 10 ಹಟ್ಟಿಗಳನ್ನು ಸರಳಯಾದೃಚ್ಛಿಕವಾಗಿ ಆಯ್ದುಕೊಂಡು ಪ್ರತಿ ಹಟ್ಟಿಯಿಂದ 15 ಕಾಡುಗೊಲ್ಲ ಮಹಿಳೆಯರನ್ನು ಉಪಪಂಗಡಗಳಿಗೆ ಅನುಗುಣವಾಗಿ ಒಂದು ತಾಲ್ಲೂಕಿಗೆ 150 ಮಹಿಳೆಯರಂತೆ 6 ತಾಲ್ಲೂಕಿನಿಂದ ಒಟ್ಟು 900 ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

ಮಾಹಿತಿ ಸಂಗ್ರಹಣಾ ವಿಧಾನಗಳು:

ಪ್ರಸ್ತುತ ಲಿಂಗತಾರಮ್ಯ ತೋರುತ್ತಿರುವ ಸಮಾಜದಲ್ಲಿ ಬುಡಕಟ್ಟು ಮಹಿಳೆಯರ ವಾಸ್ತವ ಸ್ಥಿತಿಯನ್ನು ಅಧ್ಯಯನ ಮಾಡಲು ಅನುಸರಿಸುವ ವಿಧಾನ ತಂತ್ರಗಳು ಸ್ತ್ರೀವಾದಿ ಸಂಶೋಧನಾ ಎನಿಸಿಕೊಳ್ಳುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸ್ತ್ರೀವಾದಿ ಸಂಶೋಧನಾ ವಿಧಾನದ ಕೆಲವು ಸೂಕ್ತವಾದ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುವುದು.

❖ **ಸಂದರ್ಶನ ಕೈಪಿಡಿ :–** ಬುಡಕಟ್ಟುಗಳಾದ ಕಾಡುಗೊಲ್ಲ ಮಹಿಳೆಯರು ಅನಕ್ಷರಸ್ಥರಾಗಿದ್ದು ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಸ್ಥಾನಮಾನಗಳನ್ನು ತಿಳಿದುಕೊಳ್ಳಲು ಅವರ ಜೊತೆ ನೇರವಾಗಿ ಮಾತನಾಡಲು ಸಂದರ್ಶನ ಕೈಪಿಡಿಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲಾಗುವುದು. ವಾಸ್ತವ ಸ್ಥಿತಿ ಮತ್ತು ಅವರ ಸಮಸ್ಯೆಗಳನ್ನು ತಿಳಿಯಲು ಪ್ರಯತ್ನಿಸಲಾಗುವುದು.

❖ **ಸಹಭಾಗಿತ್ವ ಅವಲೋಕನ :–** ಕಾಡುಗೊಲ್ಲ ಮಹಿಳೆಯರು ಇರುವ ಹಟ್ಟಿಗಳಿಗೆ ಹೋಗಿ ಅವರೊಂದಿಗೆ ಇದ್ದು, ವಾಸಸ್ಥಳ, ಸಂಸ್ಕೃತಿ, ಪದ್ಧತಿ, ಆಚರಣೆಗಳನ್ನು, ಜೀವನ ಶೈಲಿಯ ನೈಜ ಮಾಹಿತಿ ಪಡೆಯಲು ಸಹಭಾಗಿತ್ವ ಅವಲೋಕನವನ್ನು ಅಳವಡಿಸಿಕೊಳ್ಳಲಾಗುವುದು.

❖ **ಪ್ರಕರಣ ಅಧ್ಯಯನ ಮತ್ತು ಟೆಸ್ಟಿಮೋನಿಯಲ್ :–** ಕಾಡುಗೊಲ್ಲ ಮಹಿಳೆಯರ ಬದುಕಿನ ಒಳನೋಟ ತಿಳಿಯಲು ಮತ್ತು ಮಹಿಳೆಯರ ವೈಯಕ್ತಿಕ ಬದುಕು, ಸಾಮಾಜಿಕ ಸ್ಥಿತಿಗತಿ, ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿಯ ಸಮಗ್ರ ವಿವರಣೆಯನ್ನು ಪಡೆಯಲು ಕೆಲವು ವಿಶೇಷ ಮಹಿಳೆಯರನ್ನು ಗುರುತಿಸಿ ಪ್ರಕರಣ ಅಧ್ಯಯನ ಮತ್ತು ಟೆಸ್ಟಿಮೋನಿಯಲ್‌ಗಳನ್ನು (ಪ್ರಮಾಣ ಪತ್ರಗಳು) ಸಿದ್ಧಪಡಿಸಲಾಗುವುದು.

❖ **ಕ್ರಿಯಾತ್ಮಕ ಸಂಶೋಧನಾ ವಿಧಾನ :–** ಸಂಶೋಧನೆಯ ಜೊತೆಗೆ ಕಾಡುಗೊಲ್ಲ ಮಹಿಳೆಯರ ಸ್ವ–ಸಂಘಗಳನ್ನು ರಚಿಸಲು ಪ್ರಯತ್ನಿಸಲಾಗುವುದು. ಸಾಕ್ಷರತ ಶಿಬಿರ, ಆರೋಗ್ಯ ತಪಾಸಣೆ, ಸರ್ಕಾರಿ ಯೋಜನೆಗಳ ಕುರಿತು ಮಾಹಿತಿ ಮತ್ತು ಮೂಲ ದಾಖಲೆಗಳನ್ನು ಪಡೆಯಲು ಸಹಾಯ ಮಾಡುವುದರ ಮೂಲಕ ಕ್ರಿಯಾತ್ಮಕ ಸಂಶೋಧನೆಯನ್ನು ಕೈಗೊಳ್ಳಲಾಗುವುದು.

ಅಧ್ಯಯನದ ಮಿತಿಗಳು:

➢ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಮಹಿಳೆಯರಿಗೆ ಮಾತ್ರ ಸೀಮಿತವಾಗಿದೆ.

➢ ಈ ಅಧ್ಯಯನವು ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿನ ಕಾಡುಗೊಲ್ಲರ ಹಟ್ಟಿಗಳಿಗೆ ಮಾತ್ರ ಸೀಮಿತವಾಗಿದೆ.

ಸಾಹಿತ್ಯಾವಲೋಕನ:–

"ಲಿಂಗತ್ವ ಮತ್ತು ಬುಡಕಟ್ಟು ಸಮುದಾಯ : ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಮಹಿಳೆಯರ ಸಮಗ್ರ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಾಹಿತ್ಯವಲೋಕನ ಮಾಡಿದಾಗ ಬೇರೆ ಬೇರೆ ರೀತಿಯ ವಿಷಯ ಮಾಹಿತಿಗಳು ದೊರೆಯುತ್ತದೆ. ಪ್ರಪಂಚದದ್ಯಾಂತ ಹಲವಾರು ವರ್ಗ, ಜಾತಿ, ಧರ್ಮ, ಸಮುದಾಯಗಳನ್ನು ಕಾಣಬಹುದು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಿಭಿನ್ನತೆ ಹೊಂದಿರುವ ಸಂಸ್ಕೃತಿ, ಆಚರಣೆಗಳು ಇದ್ದು ಬುಡಕಟ್ಟು ಸಮುದಾಯಗಳು ಸಹ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಅಂತರಾಷ್ಟ್ರೀಯದಲ್ಲಿ ಸೌತ್ ಅಮೇರಿಕಾ, ಸೌತ್ ಆಫ್ರೀಕಾ, ಜಪಾನ್, ಜರ್ಮನಿ ಗಳಲ್ಲಿಯೂ ಹೆಚ್ಚು ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಇಲ್ಲಿ ಹೆಚ್ಚು ಬುಡಕಟ್ಟುಗಳು ನಗರ ಪ್ರದೇಶದ ಸಂಪರ್ಕವೇ ಇಲ್ಲದೆ ಕಾಡಿನಲ್ಲಿಯೇ ವಾಸಿಸುತ್ತಿರುವುದನ್ನು ನೋಡಬಹುದು. ಇಂತಹ ಬುಡಕಟ್ಟುಗಳನ್ನು ಜಗತ್ತಿಗೆ ಪರಿಚಯಿಸಲು ಸಂಶೋಧನೆಗಳು, ಅಧ್ಯಯನಗಳಾದವು. **ಮ್ಯಾಕ್ಸ್‌ಗ್ಲುಕ್‌ಮನ್** ಎಂಬುವರು **'ಪಾಲಿಟಿಕ್ಸ್ ಲಾ ಅಂಡ್ ರೂರಲ್ ಇನ್ ಟ್ರೈಬಲ್ ಸೊಸೈಟಿ'(2012)**ಎಂಬ ಗ್ರಂಥದಲ್ಲಿ ಸೌತ್ ಆಫ್ರೀಕದ 'ಲೋಜಿ' ಬುಡಕಟ್ಟುಗಳು ಇಂದಿಗೂ ಹೊರ ಪ್ರಪಂಚದ ಅರಿವು ಇಲ್ಲದೆ ಕಾಡಿನಲ್ಲಿಯೇ ಜೀವಿಸುತ್ತಿದ್ದಾರೆ. ಲೊಜಿಗಳು ಉಡುಪಿನ ಬಗ್ಗೆ ಅರಿವು ಇಲ್ಲದೆ ಮಣ್ಣನ್ನು ಮೈಗೆ ಸವರಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಗ್ರಾಮೀಣ ನಗರ ಪ್ರದೇಶಗಳ ಜನರನ್ನು ಅನುಮಾನದಿಂದ ನೋಡುವ ಇವರು ಕಾಡಿನೊಳಗೆ ಸಾಮಾನ್ಯ ಜನರನ್ನು ಬಿಟ್ಟುಕೊಳ್ಳುವುದಿಲ್ಲ ಎಂದು ತಿಳಿಸಿದ್ದಾರೆ. ಇಂದಿಗೂ ಹಲವಾರು ಬುಡಕಟ್ಟುಗಳು ಕಾಡಿನ ಕಗ್ಗತ್ತಿನಲ್ಲಿಯೇ ಜೀವನ ಮಾಡುತ್ತಿದ್ದಾರೆ.

ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಜೀವನಶೈಲಿ, ಸಂಸ್ಕೃತಿ, ಪದ್ಧತಿಗಳನ್ನು ಆಚರಿಸುತ್ತಿರುವುದನ್ನು ನೋಡಬಹುದು. ಬುಡಕಟ್ಟುಗಳು ಸಾಮಾನ್ಯವಾಗಿ ಕಾಡಿನಲ್ಲಿ ಅಥವಾ ಕಾಡಿನಂಚಿನಲ್ಲಿ ವಾಸಿಸುವುದು ಕಂಡುಬರುತ್ತದೆ. **ಕು. ಮಹಾನಂದಗೊಂದಿ** ಎಂಬುವರು **'ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟುಗಳು'** ಎಂಬ ಲೇಖನದಲ್ಲಿ ಬುಡಕಟ್ಟುಗಳು ಸಾಮಾನ್ಯವಾಗಿ ಕಾಡಿನಲ್ಲಿ ವಾಸ, ಪ್ರತ್ಯೇಕ ಸಂಸ್ಕೃತಿಯನ್ನು, ರಕ್ತಸಂಬಂಧದ ಅತಿಯಾದ ಅವಲಂಬನೆ, ಪ್ರತ್ಯೇಕ ಭಾಷೆ, ಅತಿಯಾದ ಪಾವಿತ್ರ್ಯತೆಯನ್ನು ಆಚರಿಸುವರು ಎಂದಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಬುಡಕಟ್ಟುಗಳು ಇಂತಹ ಲಕ್ಷಣಗಳನ್ನೆ ಹೊಂದಿರುವುದನ್ನು ಕಾಣಬಹುದು.

ಭಾರತವು ಬುಡಕಟ್ಟು ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿರುವುದನ್ನು ಕಾಣಬಹುದು. ಮಧ್ಯಪ್ರದೇಶ, ಒರಿಸ್ಸಾ, ನಾಗಾಲ್ಯಾಂಡ್, ತಮಿಳುನಾಡು, ಆಂಧ್ರಪ್ರದೇಶ ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟುಗಳು ವಾಸವಿದ್ದಾರೆ. ಹಾಗೆಯೇ ಕರ್ನಾಟಕದಲ್ಲಿಯು ಹೆಚ್ಚು ಬುಡಕಟ್ಟು ಸಮುದಾಯಗಳನ್ನು ನೋಡಬಹುದು. ಒಂದೊಂದು ಜಿಲ್ಲೆಗೂ ಬುಟಕಟ್ಟುಗಳ ಸಾಮಾಜಿಕ ವ್ಯವಸ್ಥೆ, ಜೀವನ, ಆಚಾರ–ವಿಚಾರಗಳು ಭಿನ್ನವಾಗಿರುತ್ತದೆ. ಕರ್ನಾಟಕದೆಲ್ಲೆಡೆ ಇರುವ ಬುಡಕಟ್ಟು ಸಮುದಾಯಗಳನ್ನು **ಡಾ. ಹಿ.ಚಿ ಬೋರಲಿಂಗಯ್ಯ ಮತ್ತು ಡಾ. ಎ.ಎಸ್ ಪ್ರಭಾಕರ್** ರವರು **'ಕರ್ನಾಟಕದ ಬುಡಕಟ್ಟು ಸಚಿತ್ರಕೋಶ'** ಎಂಬ ಗ್ರಂಥದಲ್ಲಿ ಒಂದೆಡೆ ಪರಿಚಯಿಸಿದ್ದಾರೆ. ಹಾಲಕ್ಕಿ, ಸಿದ್ಧಿ, ಸೋಲಿಗ, ನಾಯಕ, ಕಾಡುಗೊಲ್ಲ, ಕೊಂಚಿ ಕೊರವ, ಗೌಳಿ ಇತರೆ ಅಲೆಮಾರಿ ಬುಡಕಟ್ಟುಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಪ್ರಬಲವಾಗುವ ಅವಶ್ಯಕತೆ ಇದೆ ಎಂದಿದ್ದಾರೆ.

ಕರ್ನಾಟಕದಲ್ಲಿ ನಾನಾಬಗೆಯ ಬುಡಕಟ್ಟು ಸಮುದಾಯಗಳಿದ್ದು ಇವರ ಶಿಕ್ಷಣ, ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯು ವೈವಿಧ್ಯತೆಯಿಂದ ಕೂಡಿವೆ. ಅನಕ್ಷರತೆ, ಅನಾರೋಗ್ಯ, ಆರ್ಥಿಕವಾಗಿ ಹಿಂದುಳಿರುವಿಕೆ ಬುಡಕಟ್ಟುಗಳಲ್ಲಿ ಪ್ರಮುಖ ಪಿಡುಗಾಗಿದೆ. ಸಾಕ್ಷರತೆಯ ಮಟ್ಟ ಬುಡಕಟ್ಟುಗಳಲ್ಲಿ 73% ರಷ್ಟಿದ್ದು ಮಹಿಳೆಯರ ಸಾಕ್ಷರತೆಯ ಪ್ರಮಾಣ 43% (2011 ಜನಗಣತಿ ಪ್ರಕಾರ). ಬುಡಕಟ್ಟುಗಳ ಅಭಿವೃದ್ಧಿಯಾಗುವುದರ ಬಗ್ಗೆ **ಡಾ.ತಾರಿಹಳ್ಳಿ ಹನುಮಂತಪ್ಪ**ನವರು **'ಕರ್ನಾಟಕದ ಬುಡಕಟ್ಟು ಸಮಾಜಗಳು'** ಎಂಬ ಪುಸ್ತಕದಲ್ಲಿ ಬುಡಕಟ್ಟುಗಳ ಪುನರ್ವಸತಿ, ಕೆಳಸಮುದಾಯಗಳ ಸ್ಥಿತ್ಯಂತರಗಳ ಅಭಿವೃದ್ದಿಯಾಗಬೇಕು ಮತ್ತು ಬುಡಕಟ್ಟುಗಳಿಗೆ ಶಿಕ್ಷಣ ಪಡೆಯುವುದಕ್ಕೆ ಸರ್ಕಾರಗಳು ಯೋಜನೆಗಳನ್ನು

ಸರಿಯಾಗಿ ರೂಪಿಸಬೇಕು ಎಂದಿದ್ದಾರೆ. ಕರ್ನಾಟಕದ ಬುಡಕಟ್ಟುಗಳ ಪಟ್ಟಿಯಲ್ಲಿ ಇನ್ನೂ ಹಲವಾರು ಸಮುದಾಯಗಳನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದನ್ನು ಕಾಣಬಹುದು. ಬುಡಕಟ್ಟುಗಳ ಬಗ್ಗೆ ಸರಿಯಾದ ಸಮೀಕ್ಷೆಗಳು ನಡೆದು ಅವರನ್ನು ಗುರುತಿಸಿ ಸೌಲಭ್ಯಗಳನ್ನು ಪಡೆಯುವಂತೆ ಸರ್ಕಾರಗಳು ಮಾಡಬೇಕಿದೆ.

ಬುಡಕಟ್ಟುಗಳಾದ ಕಾಡುಗೊಲ್ಲರು ತಮ್ಮದೇ ಆದ ಸಂಸ್ಕೃತಿಯನ್ನು ಒಳಗೊಂಡಿದೆ. ಪ್ರಾಚಿನ ಕಾಲದ ಬುಡಕಟ್ಟುಗಳಾದ ಕಾಡುಗೊಲ್ಲರು ಹಿಂದೆ ಕಾಡಿನಲ್ಲಿ ಹೆಚ್ಚಾಗಿ ವಾಸಮಾಡುತ್ತದ್ದವರು ನಂತರ ಕಾಡಿನ ಅಂಚಿನಲ್ಲಿ, ನಗರ ಗ್ರಾಮಗಳಿಂದ ದೂರದಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡು ಜೀವಿಸಿತ್ತಿದ್ದಾರೆ. **ಡಾ.ಕೃಷ್ಣ ಮೂರ್ತಿಹನೂರು** ರವರು **'ಮ್ಯಾಸಬೇಡರು'** ಎಂಬ ಕೃತಿಯಲ್ಲಿ ಕರ್ನಾಟಕದ ಬುಡಕಟ್ಟುಗಳ ಬಗ್ಗೆ ಹೇಳುತ್ತಾ 'ಬುಡಕಟ್ಟುಗಳದ್ದು ಅರಣ್ಯ ಸಂಸ್ಕೃತಿಯಾದರೆ ಉಳಿದದ್ದು ಗ್ರಾಮ, ನಗರ ಪಟ್ಟಣಗಳ ಸಂಸ್ಕೃತಿ' ಎಂದಿದ್ದಾರೆ. ಸಾಮಾನ್ಯವಾಗಿ ಕಾಡುಗೊಲ್ಲರು ಮತ್ತು ಮ್ಯಾಸ ಬೇಡರು ಕೆಲವೊಂದು ಕಡೆ ಒಂದೇ ಪ್ರದೇಶದಲ್ಲಿ ಕಾಣಿಸಿಕೊಳ್ಳುವುದರ ಬಗ್ಗೆ ಹೇಳಿದ್ದಾರೆ. ಕೆಲವೊಂದು ಪದ್ದತಿಗಳು, ಆಚರಣೆಗಳು ಒಂದೆ ರೀತಿಯಲ್ಲಿರುತ್ತದೆ.

ಕಾಡುಗೊಲ್ಲರನ್ನು ಭಾರತದಾದ್ಯಂತ ಕಾಣಬಹುದು. ಅಲೆಮಾರಿಗಳಾಗಿದ್ದ ಕಾಡುಗೊಲ್ಲರು ದೆಹಲಿ ಮೂಲದಿಂದ, ಆಂಧ್ರ ಮೂಲದಿಂದ ವಲಸೆ ಬಂದವರೆಂದು ಅದರಲ್ಲಿಯು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯತ್ತ ಹೆಚ್ಚಾಗಿ ವಲಸೆ ಬಂದಿರುವುದಾಗಿ ಮೂಲಗಳು ತಿಳಿಸುತ್ತವೆ. **ಡಾ.ವಿರೂಪಾಕ್ಷಿ ಪೂಜಾರಹಳ್ಳಿ**ರವರು **'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು'**ಎಂಬ ಪುಸ್ತಕದಲ್ಲಿ ಚಿತ್ರದುರ್ಗಜಿಲ್ಲೆಯು ಬಯಲುಸೀಮೆ ಪ್ರದೇಶವಾಗಿರುವುದರಿಂದ ಕಾಡುಗೊಲ್ಲರ ಮೂಲ ಕಸಬು ಪಶುಸಂಗೋಪನೆಯಾಗಿದ್ದು ಹೆಚ್ಚು ಅನುಕೂಲಕರವಾಗಿದೆ. ಕಾಡು ಬೆಟ್ಟಗುಡ್ಡ ಗಳಿಂದಲೂ ಕೂಡಿರುವ ಪ್ರದೇಶವಾಗಿದ್ದು ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ನೆಲೆಸಿದ್ದಾರೆ ಎಂದು ಹೇಳಿದ್ದಾರೆ. ಕುಲದೈವನಾದ ಜುಂಜಪ್ಪ ಜಾತ್ರೆಯು ಕಾಡುಗೊಲ್ಲರ ಪ್ರಮುಖ ಹಬ್ಬವಾಗಿದ್ದು ಚಿತ್ರದುರ್ಗದಲ್ಲಿ ಹೆಚ್ಚಾಗಿ ಕಾಡುಗೊಲ್ಲರ ಐತಿಹ್ಯಗಳು ಇರುದನ್ನು ನೋಡಬಹುದು.

ಲಿಂಗತಾರತಮ್ಯವಿರುವ ಈ ಸಮಾಜದಲ್ಲಿ ಮಹಿಳೆಯರ ಪಾತ್ರ ಎಲ್ಲಾ ವರ್ಗದಲ್ಲಿಯೂ ಹೆಚ್ಚಿದ್ದರು ಅವರ ಪಾತ್ರ ಶೂನ್ಯ ಎಂದು ಕಡೆಗಣಿಸಲಾಗಿದೆ. ಲಿಂಗತಾರತಮ್ಯವು ಸಮಾಜದ ಒಂದು ಪಿಡುಗಾಗಿ ಆವರಿಸಿದೆ. ಬುಡಕಟ್ಟು ಸಮುದಾಯಗಳಲ್ಲಿಯು ಪುರುಷ ಮತ್ತು ಸ್ತ್ರೀಯರ ನಡುವೆ ಅಸಮಾನತೆ, ಲಿಂಗತಾರತಮ್ಯತೆ ಇರುವುದು ಕಂಡುಬರುತ್ತದೆ. ಬುಡಕಟ್ಟುಗಳ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನವಿದ್ದರೂ ಅದು ಪುರುಷಾಧಿಕಾರದ ಮೇಲೆ ನಿಂತಿದೆ. ಕಾಡುಗೊಲ್ಲ ಸಮುದಾಯದ ಮಹಿಳೆಯರು ಸಂಸ್ಕೃತಿ, ಪದ್ಧತಿ ಆಚರಣೆಗಳಿಗೆ ಗುರಿಯಾಗಿದ್ದಾಳೆ. **ಡಾ.ಗೀತಾನಾಗಭೂಷಣ**ರವರ **'ಸಂಸ್ಕೃತಿ ಮಹಿಳಾ ಮಾಲಿಕೆ 8'**ಎಂಬ **ಪುಸ್ತಕದಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ನವರು 'ಕಾಡುಗೊಲ್ಲ ಮಹಿಳೆ' ಎಂಬ ಲೇಖನದಲ್ಲಿ** ಕರ್ನಾಟಕದ ಬುಡಕಟ್ಟು ಮಹಿಳೆಯರ ಬಗ್ಗೆ ಪರಿಚಯಿಸಿದ್ದು 'ಕಾಡುಗೊಲ್ಲ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಭಾಗವಹಿಸಿದ್ದರು ಅಧಿಕಾರವೆಲ್ಲವು ಪುರುಷನದ್ದು' ಎಂದಿದ್ದಾರೆ. ಪಶುಪಾಲಕರಾಗಿ, ಕೃಷಿಕರಾಗಿ ಮಹಿಳೆಯರು ಭಾಗವಹಿಸುತ್ತಾರೆ. ಸಂಸ್ಕೃತಿಯಲ್ಲಿ ಮಹಿಳೆಯರ ಬಗ್ಗೆ ಹೆಚ್ಚಾಗಿ ತಿಳಿಸಿದ್ದು ಆವರ ಆರೋಗ್ಯ, ಶೈಕ್ಷಣಿಕ, ಸಾಮಾಜಿಕ ಕುರಿತಂತೆ ಮಾಹಿತಿ ಕಡಿಮೆಯಿದೆ.

ಬುಡಕಟ್ಟುಗಳು ಸಂಸ್ಕೃತಿಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಪ್ರಕೃತಿಯೇ ದೇವರು ಎಂಬ ನಂಬಿಕೆ ಇದ್ದು ಸೂರ್ಯ, ಚಂದ್ರ, ಬೆಂಕಿ, ಭೂಮಿಗೆ ಪೂಜೆ ಮಾಡುವುದು ರೂಢಿಯಲ್ಲಿರುತ್ತದೆ. ಸೂತಕ ಪದ್ಧತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವರು. **ಡಾ. ಗಂಗಾಧರ ದೈವಜ್ಞ** ರವರು **'ಬುಡಕಟ್ಟು ಸಮಾಜ (ಹುಟ್ಟು ಸಾವಿನ ನಡುವೆ)'** ಎಂಬ ಪುಸ್ತಕದಲ್ಲಿ ಕರ್ನಾಟಕದ ಬುಡಕಟ್ಟುಗಳ ವಿವಿಧ ಮುಖಗಳ ಸಂಸ್ಕೃತಿಯನ್ನು ತಿಳಿಸಿದ್ದಾರೆ. ಹಾಲಕ್ಕಿ, ಸೋಲಿಗ, ಕಾಡುಗೊಲ್ಲ, ಸಿದ್ಧಿ ಹಲವಾರು

ಬುಡಕಟ್ಟುಗಳಲ್ಲಿ ಋತುಸೂತಕ, ಹೆರಿಗೆ ಸೂತಕವು ಕಟ್ಟುನಿಟ್ಟಾಗಿದ್ದು ಮಹಿಳೆಯರ ಆರೋಗ್ಯದ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ ಎಂದು ಹೇಳಿದ್ದಾರೆ. ಪಿತೃಪ್ರಧಾನತೆಯ ಆಚರಣೆಗಳು ಎಲ್ಲಾ ಸಮುದಾಯಗಳಲ್ಲಿಯು ಸೂತಕ ಎಂದು ಮಹಿಳೆಯನ್ನು ಅಸ್ಪೃಶ್ಯಳನ್ನಾಗಿಸಿವೆ. ಋತುಮತಿ ಸಮಯದಲ್ಲಿ ತಮ್ಮ ಹಟ್ಟಿಗಳಿಂದ ಹೊರಗೆ ಇಡುವುದು, ಹೆರಿಗೆಯ ಸಮಯದಲ್ಲಿ 'ಜೆನಿಗೆಶಾಸ್ತ್ರ' ಮಾಡುವ ಪದ್ಧತಿ ಕಾಡುಗೊಲ್ಲರಲ್ಲಿ ಇಂದಿಗೂ ಆಚರಿಸುವುದನ್ನು ಕಾಣಬಹುದು. ಪೂಜೆ ಮಾಡಿ ಸೂತಕ ಕಳೆದು ನಂತರ ಹಟ್ಟಿಯೊಳಗೆ ಪ್ರವೇಶ ಮಾಡುವುದು ಆಚರಣೆಯಲ್ಲಿದೆ.

ಪಿತೃಪ್ರಧಾನತೆ ಸಮಾಜವು ಮಹಿಳೆಯರ ಬದುಕಿನಲ್ಲಿ ವ್ಯತ್ಯಾಸಗಳಿರಲು ಕಾರಣವಾಗಿದೆ. ಬುಡಕಟ್ಟುಗಳಲ್ಲಿಯು ಮಾತೃಪ್ರಧಾನ ಕುಟುಂಬ, ಪಿತೃಪ್ರಧಾನ ಕುಟುಂಬಗಳು ಇರುತ್ತವೆ. ಮಾತೃಪ್ರಧಾನ ಕುಟುಂಬಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆಯಿರುತ್ತದೆ. **ಡಾ. ಹೇಮಲತಾ ಎಚ್.ಎಂ** ರವರು **'ಮಹಿಳಾ ಅಧ್ಯಯನ 9'** ಎಂಬ ಪುಸ್ತಕದಲ್ಲಿ ಭಾರತದ ಬುಡಕಟ್ಟುಗಳಲ್ಲಿ ಮಾತೃಪ್ರಧಾನ, ಪಿತೃಪ್ರಧಾನ ಕುಟುಂಬಗಳ ಬಗ್ಗೆ ವಿವರಿಸಿದ್ದಾರೆ. ಖಾಸಿ ಬುಡಕಟ್ಟು ಮಾತೃಪ್ರಧಾನವಾಗಿದ್ದು ಇಲ್ಲಿ ಪೂಜಾರಣಿಯರು ಇರುತ್ತಾರೆ ಅಧಿಕಾರವೆಲ್ಲವು ಮಗಳಿಗೆ ಇರುತ್ತದೆ. ಹಾಗೂ ತೋಡರಲ್ಲಿ ಪಿತೃಪ್ರಧಾನತೆ ಕುಟುಂಬವಿದ್ದು ಮಹಿಳೆಯರನ್ನು ಪೂಜೆ, ವಿಧಿವಿಧಾನಗಳಿಂದ ಸಂಪೂರ್ಣವಾಗಿ ದೂರವಿಡುತ್ತಾರೆ. ಎಂದು ತಿಳಿಸಿದ್ದಾರೆ. ಸರ್ಕಾರಗಳು ಬಂಡವಾಳಶಾಹಿಗಳನ್ನು ಆಹ್ವಾನ ಮಾಡುವ ಮೂಲಕ ಬುಡಕಟ್ಟು ಪ್ರದೇಶಗಳನ್ನು ಆಕ್ರಮಿಸುವಲ್ಲಿ ಮುಂದಾಗಿವೆ ಎಂಬುದರ ಬಗ್ಗೆ ಮಾತಾನಾಡಿದ್ದಾರೆ. ಕಾಡಿನಿಂದ ಬುಡಕಟ್ಟುಗಳನ್ನು ಒತ್ತಾಯಪೂರ್ವಕವಾಗಿ ಹೊರದೂಡಿಸುವ ಕಾರ್ಯಗಳು ಇಂದಿಗೂ ನಡೆಯುತ್ತಲೆ ಇವೆ.

ಕಾಡುಗೊಲ್ಲರು ಹಟ್ಟಿಗೊಲ್ಲರಾಗಿ ಮಾರ್ಪಡಾಗುತ್ತಿದ್ದು ಕಾಡಿನ ಅಂಚಿನಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡು ಪ್ರತ್ಯೇಕವಾಗಿ ಜೀವನ ಮಾಡುತ್ತಿರುದನ್ನು ನೋಡಬಹುದು. ತಮ್ಮ ಕುಲದೈವವಾದ ಜುಂಜಪ್ಪನ ಗುಡಿಗೆ ಮೈಲಿಗೆ ಯಾಗುತ್ತದೆ ಎಂದು ತಮ್ಮ ಹಟ್ಟಿಗಳಿಗೆ ಮಾದಿಗ, ಒಲೆಯರಿಗೆ ಪ್ರವೇಶ ನಿರ್ಬಂಧ ಮಾಡಿರುತ್ತಾರೆ. ಕಾಡುಗೊಲ್ಲ ಸಮುದಾಯವು ಅಸ್ಪೃಶತೆಯನ್ನು ಆಚರಿಸುವ ಬುಡಕಟ್ಟುಗಳಲ್ಲಿ ಒಂದಾಗಿದೆ. **ಡಾ.ಹಿ.ಚಿ.ಬೋರಲಿಂಗಯ್ಯ** ರವರು **'ಬುಡಕಟ್ಟು ದೈವರಾಧನೆ'** ಎಂಬ ಕೃತಿಯಲ್ಲಿ ಚಿತ್ರದುರ್ಗ, ತುಮಕೂರು ಗೊಲ್ಲರ ಹಟ್ಟಿಗಳ ಚಿತ್ರಣವನ್ನು ವಿಶ್ಲೇಶಿಸುತ್ತಾ 'ಕಾಡುಗೊಲ್ಲರು ದೇವರ ಪಾವಿತ್ರ್ಯತೆ ವಿಷಯ ಬಂದಾಗ ಅಷ್ಟೇ ನಿಷ್ಟುರರು. ಬಹುಷಃ ಇಡೀ ಕರ್ನಾಟಕದಲ್ಲಿ ಎಲ್ಲಿಯೂ ಇಷ್ಟು ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಆಚರಿಸುವ ಬುಡಕಟ್ಟು ಇನ್ನೊಂದಿಲ್ಲ' ಎಂದಿದ್ದಾರೆ. ಹಿಂದೂ ಧರ್ಮದ ಪ್ರಕಾರ ಗಂಡ ಸತ್ತರೆ ತಾಳಿ, ಕುಂಕುಮ, ಬಳೆ ತೆಗೆಯುವ ಸಂಪ್ರದಾಯವಿದೆ ಆದರೆ ಕಾಡುಗೊಲ್ಲ ಮಹಿಳೆಯರು ತಮ್ಮ ಗಂಡನನ್ನು ಕಳೆದುಕೊಂಡರೆ ತಾಳಿ, ಕುಂಕುಮ ತೆಗೆಯುವುದಿಲ್ಲ, ತಮ್ಮ ಕುಲದೈವನಾದ ಕೃಷ್ಣನನ್ನು ತಮ್ಮ ಗಂಡನೆಂದು ನಂಬಿರುತ್ತಾರೆ. ವಿಧವೆ ಪದ್ಧತಿ ಇವರಲ್ಲಿ ಆಚರಣೆಯಲ್ಲಿ ಇಲ್ಲದೆ ಇರುವುದು ಕಂಡುಬರುತ್ತದೆ.

ಸರ್ಕಾರವು ಬುಡಕಟ್ಟು ಪಟ್ಟಿಯನ್ನು ಮಾಡಿದ್ದು ಕಾಡುಗೊಲ್ಲರನ್ನು ಬುಡಕಟ್ಟು ಪಟ್ಟಿಯಿಂದ ನಿರ್ಲಕ್ಷಿಸಲಾಗಿದೆ. ಬುಡಕಟ್ಟು ಲಕ್ಷಣಗಳನ್ನು ಹೊದಿದ್ದರು ಅವರನ್ನು ಯಾವ ವರ್ಗಕ್ಕೆ ಸೇರಿಸಬೇಕೆಂಬ ಗೊಂದಲಗಳು ಇನ್ನೂ ನಡೆಯುತ್ತಲೆ ಇವೆ. ಸರ್ಕಾರದ ಬುಡಕಟ್ಟುಗಳ ಸೌಲಭ್ಯದಿಂದ ವಂಚಿತರಾಗಿದ್ದಾರೆ. **ಎಎಡಿ. ಲೂಯಿಸ್** ರವರು **'ದಿ ಟ್ರೈಬ್ ಆಫ್ ಮೈಸೂರ್'** ಎಂಬ ಕೃತಿಯಲ್ಲಿ 'ಕಾಡುಗೊಲ್ಲರು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿಸಲು ಅರ್ಹರಿದ್ದಾರೆ' ಎಂದು ಅವರಿಗೆ ಮೀಸಲಾತಿ ಸೌಲಭ್ಯಗಳನ್ನು ನೀಡಬೇಕು ಎಂದಿದ್ದಾರೆ.

ಆಕರ ಗ್ರಂಥಗಳು :– "ಲಿಂಗತ್ವ ಮತ್ತು ಬುಡಕಟ್ಟು ಸಮುದಾಯ: ಕಾಡುಗೊಲ್ಲ ಮಹಿಳೆಯರ ಸಮಗ್ರ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದ ಆಕರಗ್ರಂಥಗಳನ್ನು ಬಳಸಿಕೊಂಡು ಟಿಪ್ಪಣಿ ಮಾಡಿಕೊಂಡು ಸಂಶೋಧನೆಯ ಸಾರಲೇಖವನ್ನು ಸಿದ್ಧಪಡಿಸಲು ಈ ಕೆಳಗಿನ ಆಕರಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ.

- **ಪುಸ್ತಕಗಳು:–**

1. **ಮ್ಯಾಕ್ಸ್ ಗ್ಲುಕ್‌ಮನ್ :– 'ಪಾಲಿಟಿಕ್ಸ್ ಲಾ ಅಂಡ್ ರೂರಲ್ ಇನ್ ಟ್ರೈಬಲ್ ಸೊಸೈಟಿ'** ಟ್ರಾನ್ಸಾಕ್ಷನ್ ಪಬ್ಲಿಷರ್ಸ್, ಆಕ್ಸ್‌ಫರ್ಡ್ ೨೦೦೨
2. **ಡಾ॥ ಹಿ.ಚಿ ಬೋರಲಿಂಗಯ್ಯ , ಡಾ॥ ಎ.ಎಸ್ ಪ್ರಭಾಕರ :– 'ಕರ್ನಾಟಕ ಬುಡಕಟ್ಟು ಸಚಿತ್ರ ಕೋಶ'** ಪ್ರಸಾರಂಗ ಹಂಪಿ ೨೦೧೩
3. **ಕೃಷ್ಣಮೂರ್ತಿಹನೂರು :– 'ಮ್ಯಾಸಬೇಡರು'** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೨೦೦೬
4. **ಡಾ॥ ವಿರೂಪಾಕ್ಷ ಪೂಜಾರಹಳ್ಳಿ :– 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು'** ಪ್ರಸಾರಾಂಗ, ಹಂಪಿ ೨೦೦೨
5. **ಡಾ॥ ಹೆಬ್ಬಾಲೆ ಕೆ ನಾಗೇಶ್ :– 'ಬಹುಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಮಹಾಸಮನ್ವಯ'** ಪ್ರಸಾರಾಂಗ, ಹಂಪಿ ೨೦೧೧
6. **'ಚಿತ್ರದುರ್ಗ ಜಿಲ್ಲಾ ಅಂಕಿಅಂಶಗಳ ನೋಟ'** ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕಛೇರಿ. ಚಿತ್ರದುರ್ಗ ೨೦೧೮–೨೦೧೯
7. **ಡಾ॥ ಗಂಗಾಧರ ದೈವಜ್ಞ :– 'ಬುಡಕಟ್ಟು ಸಮಾಜ ಹುಟ್ಟುಸಾವಿನ ನಡುವೆ'** ಪ್ರಸಾರಾಂಗ ಹಂಪಿ ೨೦೧೫
8. **ಡಾ॥ ಹಿ.ಚಿ ಬೋರಲಿಂಗಯ್ಯ :– 'ಬುಡಕಟ್ಟು ದೈವಾರಾಧನೆ'** ಪ್ರಸಾರಾಂಗ ಹಂಪಿ ೨೦೧೫

- **ಲೇಖನಗಳು:–೧) ಡಾ॥ ಗೀತಾನಾಗಭೂಷಣ ಸಂಪಾದಕರು :– "ಸಂಸ್ಕೃತಿ ಮಹಿಳಾ ಮಾಲಿಕೆ" ಡಾ॥ ಮೀರಾಸಾಬಿಹಳ್ಳಿ ಶಿವಣ್ಣ : 'ಕಾಡುಗೊಲ್ಲ ಮಹಿಳೆ'.** ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು–೨೦೧೧

  ೨) ಡಾ॥ ತಾರಿಹಳ್ಳಿ ಹನುಮಂತಪ್ಪ ಸಂಪಾದಕರು :– "ಕರ್ನಾಟಕದ ಬುಡಕಟ್ಟು ಸಮುದಾಯಗಳು" ಡಾ॥ಬಿ.ಪ್ರೇಮಾನಂದ: 'ಬುಡಕಟ್ಟುಗಳು ಮತ್ತು ಶಿಕ್ಷಣ'. ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೧೦

- https://scholar.google.co.in
- https://www.ducksters.com>history
- https://www.indiatoday.in

ಸಂಶೋಧನಾ ವಿದ್ಯಾರ್ಥಿನಿ
ಮಿನಿಮೋಳ್. ಹೆಚ್
ಮಹಿಳಾ ಅಧ್ಯಯನ ವಿಭಾಗ
ಕ.ರಾ.ಮ.ವಿ.ವಿ. ವಿಜಯಪುರ

ಮಾರ್ಗದರ್ಶಕರು
ಡಾ. ಹೇಮಲತಾ ಎಚ್.ಎಂ
ಮಹಿಳಾ ಅಧ್ಯಯನ ವಿಭಾಗ
ಕ.ರಾ.ಮ.ವಿ.ವಿ. ವಿಜಯಪುರ